## ಇಲ್ಲಿಯವರೆಗೆ



ಅಪ್ಪ ಇಷ್ಟು ದೊಡ್ಡ ಮನೆ ಯಾಕೆ ಕಟ್ಟಿಸಿದ್ದು, ತಾನು ಇನ್ನೂ ಆರೇಳು ವರ್ಷ ಅಮೇರಿಕದಲ್ಲಿ ಇದ್ದು ಕೆಲಸ ಮಾಡಬೇಕೆಂದಿದ್ದೇನೆ ಎಂದು ಅಭಿ ಹೇಳುತ್ತಾನೆ. ಅದನ್ನು ಮೊದಲೇ ಹೇಳಬೇಕಿತ್ತು ಎನ್ನುತ್ತಾನೆ ನರಹರಿ. ಗೃಹಪ್ರವೇಶವನ್ನು ಸಿಂಪಲ್ ಆಗಿ ಮಾಡಿ ಕೆಲಸದವರಿಗೇ ಅಲ್ಲಿ ಇರಲು ಹೇಳಿ ಮತ್ತೆ ಅಮೆರಿಕಕ್ಕೆ ಹೋಗುವ ನಿರ್ಧಾರ ಮಾಡುತ್ತಾರೆ. ಈ ಮಧ್ಯೆ ಶಾಲ್ಮಲಿಗೆ ಜ್ವರ ಬರುತ್ತದೆ. ಆಸ್ಪತ್ರೆಗೆ ಅಡ್ಮಿಟ್ ಆದಾಗ ಮಲೇರಿಯ ಎಂಬುದು ದೃಢವಾಗುತ್ತದೆ. ಆಕೆ ತನ್ನ ತವರು ಮನೆಗೆ ತೆರಳುತ್ತಾಳೆ. ಅಭಿ ಮತ್ತು ಸುಕೃತಿ ಮತ್ತೆ ಅಮೆರಿಕಕ್ಕೆ ವಾಪಸ್ ಆಗುತ್ತಾರೆ. ಕೆಲವೇ ದಿನಗಳಲ್ಲಿ ನರಹರಿ ಕೂಡ ಅಮೆರಿಕಕ್ಕೆ ಹೋಗುತ್ತಾನೆ. ಶಾಲ್ಮಲಿ ಹುಷಾರಾಗುತ್ತಿರುವ ಬಗ್ಗೆ ಸುದ್ದಿ ಬರುತ್ತದೆ. ಮುರಲಿ ಕೆಲಸದ ನಿಮಿತ್ತ ಪ್ರವಾಸ ಹೋಗಿರುವ ಕಾರಣ ಸನ್ಮತಿ ಒಬ್ಬಳೇ ಮನೆಯಲ್ಲಿರುತ್ತಾಳೆ. ನರಹರಿ ಕುಟುಂಬಕ್ಕೆ ಅಡುಗೆ ಇತ್ಯಾದಿ ಸಹಾಯ ಮಾಡುತ್ತಾಳೆ ಸನ್ಮತಿ.

ಸನ್ಮತಿ ಸ್ವಲ್ಪ ಹೊತ್ತು ಸೀರಿಯಲ್ ನೋಡುತ್ತಾಳೆ. ಸರ್ ಒಪ್ಪಿದ್ರೆ ನಿಮ್ಮ ಕೋಣೆಯಲ್ಲಿ ಇಟ್ಟುಕೊ ಅಂತ ಹೇಳಿದ್ದೇನೆ. ದನಿಯನ್ನು ದೊಡ್ಡದು ಮಾಡ್ಬೇಡ. ಕೋಣೆಯೊಳಗೆ ಕೇಳಿಸಿದ್ರೆ ಸಾಕು ಅಂತ ಹೇಳಿದ್ದೇನೆ'

'ಪರವಾಗಿಲ್ಲ ಇಟ್ಟುಕೊಳ್ಳಲಿ. ಶಬ್ದದ ಬಗ್ಗೆ ನಂಗೆ ಕೂಡ ಯೋಚನೆ ಬಂದಿತ್ತು. ಆ ಬಗ್ಗೆ ನೀನು ಹೇಳಿದ್ದು ಸರಿ. ನಾನು ದೊಡ್ಡ ಶಬ್ದವನ್ನು ಇಷ್ಟಪಡುವುದಿಲ್ಲ. ನಿಂಗೊತ್ತಲ್ಲ, ವಯಸ್ಸಾದವರಿಗೆ ದೊಡ್ಡ ಶಬ್ದದಲ್ಲಿ ಹಾಡು, ಭಾಷಣ ಕೇಳಲಿಕ್ಕಾಗುವುದಿಲ್ಲ' ಎಂದ ನರಹರಿ.

ವಾಸ್ತವದಲ್ಲಿ, ಯಾವತ್ತೂ ಮಹಡಿಯ ಮೇಲಿನ ಸನ್ಮತಿ ಮತ್ತು ಅಮರೇಶನ ಕೋಣೆಗಳಿಂದ ಮಾತು ಮತ್ತು ಇತರ ಶಬ್ದ ಕೆಳಗೆ ಕೇಳಿಸುತ್ತಿರಲಿಲ್ಲ. ಯಾವುದೇ ಶಬ್ದದಿಂದ ಕೆಳಗಿನ ಕೋಣೆಗಳಲ್ಲಿ ಮಲಗಿರುವವರಿಗೆ ಕಿರಿಕಿರಿಯಾಗದಂತೆ ಅಣ್ಣ ತಂಗಿ ಜಾಗ್ರತೆ ವಹಿಸುತ್ತಿದ್ದಾರೆ ಎಂದು ನರಹರಿ ಮತ್ತು ಶಾಲ್ಮಲಿಗೂ ಅನಿಸಿತ್ತು.

16

### ಅಮೆರಿಕ ಬಿಟ್ಟು ಬಂದ ಅಭಿ

ಅಭಿ ಅಮೆರಿಕೆ ಬಿಟ್ಟು ಬಂದ. ಅಮೆರಿಕೆಯಲ್ಲಿ ಕೇವಲ ಸಂಪಾದನೆಗೋಸ್ಕರ ಜೀವಿಸಬೇಕಲ್ಲ ಎಂದು ಕೆಲವು ವರ್ಷಗಳಿಂದ ಅಭಿಗೂ ಅನಿಸತೊಡಗಿತ್ತು. ತನ್ನ ಇಷ್ಟದಂತೆ ತನಗೆ ಇಷ್ಟವಾದುದನ್ನು ಮಾಡಬೇಕು; ಅಪ್ಪ ಅಷ್ಟು ದೊಡ್ಡ ಮನೆ ಯಾಕೆ ಕಟ್ಟಿಸಿದರು, ನನಗಂತೂ ಅದು ಬೇಡ. ನಾನು ಒಂದು ಸಣ್ಣ ಮನೆ ಕಟ್ಟಿಸಿಕೊಳ್ತೇನೆ ಎಂದೆಲ್ಲ ಯೋಚಿಸಿದ್ದ ಅಭಿ. 'ಅಪ್ಪಾ, ನಾನು ಮದುವೆಯಾಗುವುದಿಲ್ಲ' ಎಂಬ ಒಂದು ವಾಕ್ಯ ಅವನ ಮನಸ್ಸಿನಲ್ಲಿ ತುಂಬಾ ಸಮಯದಿಂದ ಹೊರಳಾಡುತ್ತಲೇ ಇತ್ತು. ಅಪ್ಪ ಏನೂ ಹೇಳುವುದಿಲ್ಲ. ಯಾವುದರ ಕುರಿತೂ ಆಕ್ಷೇಪವೆತ್ತುವುದಿಲ್ಲ, ಹಾಗೆ ಬೇಡ, ಹೀಗಾಗಬೇಕು ಎಂದು ಯಾವುದರ ಬಗ್ಗೆಯೂ ಯಾವತ್ತೂ ಹೇಳಿದ್ದಿಲ್ಲ. ಆದ್ದರಿಂದ ನಾನು ಮದುವೆಯಾಗುವುದಿಲ್ಲ ಎಂದು ಹೇಳಿದ್ರೆ ಅಪ್ಪ ಸುಮ್ಮನಿರುತ್ತಾರೆ, ನಿಶ್ಚಲವಾಗಿ ನಿರ್ಲಿಪ್ತವಾಗಿ ಇರುತ್ತಾರೆ. ಒಬ್ಬರು ಇನ್ನೊಬ್ಬರ ವ್ಯಕ್ತಿತ್ವವನ್ನು ನಿರ್ಮಿಸಲು ಪ್ರಯತ್ನಿಸಬಾರದು. ಅದು ಸಾಧ್ಯವೂ ಅಲ್ಲ. ಅವರವರ ವ್ಯಕ್ತಿತ್ವವನ್ನು ಅವರವರೇ ನಿರ್ಮಿಸಿಕೊಳ್ಳಬೇಕು. ಅಪ್ಪ ಅಮ್ಮ ಬಂಧುಗಳು, ಸ್ನೇಹಿತರು ಸಹಾಯ ಮಾಡುವುದು ಸರಿ. ಆದರೆ ಮದುವೆಯ ವಿಷಯದಲ್ಲಿ ಹಾಗೆ ಮಾಡಬೇಡ, ಹೀಗೆ ಮಾಡು ಎಂದು ಒತ್ತಡ ಹೇರುವುದು, ಮನೆ ಕಟ್ಟಿಸಿಕೊಳ್ಳುವಾಗ ಏನೇನೋ ಸಲಹೆಗಳನ್ನು ನೀಡುವುದು, ನೌಕರಿ ಹುಡುಕುವಾಗ ತಮ್ಮ ಇಷ್ಟದಂತೆ ಯಾವ ಕೆಲಸ ಒಳ್ಳೆಯದು ಯಾವುದು ಕೆಟ್ಟದು ಎಂದು ಅರವತ್ತು ದಾಟಿದವರು, ಯುವಕ ಯುವತಿಯರ ಮನಸ್ಸನ್ನು ಬದಲಾಯಿಸಲು ಹೊರಡುವುದು ಯಾವುದೂ ಸರಿಯಲ್ಲ' ಎಂದು ಅಪ್ಪ ಹೇಳುತ್ತಿದ್ದರು. ಆದ್ದರಿಂದ ಏನು ಮಾಡುವುದಕ್ಕೂ ತನಗೆ ಸಂಪೂರ್ಣ ಸ್ವಾತಂತ್ರ್ಯವಿದೆ ಎಂದು ಅಭಿ ನಂಬಿದ್ದ.

ಅಪ್ಪನೊಡನೆ ಅಭಿ, 'ಅಮೆರಿಕೆಯನ್ನು ಬಿಡಲು ಎಲ್ಲಾ ತಯಾರಿ ಮಾಡಿದ್ದೇನೆ. ಆದರೆ ನಾನೇ ಮಾಡಬೇಕಾದ ಎರಡು ತಿಂಗಳ ಕೆಲಸ ಬಾಕಿ ಇದೆ. ಆದ್ದರಿಂದ ಬೇಗನೆ ಹೋಗಬೇಕಾಗಿದೆ' ಎಂದು ಹೇಳಿದ. ಅಭಿ ಅಮರೇಶ ಮತ್ತು ಸನ್ಮತಿಯೊಡನೆ ಮಾತಾಡಿ, 'ನೀವು ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುತ್ತೀರಿ ಎಂಬ ವಿಶ್ವಾಸ ನನಗಿದೆ' ಎಂದ.

'ನಾನು ಅವರನ್ನು 'ಅಕ್ಕಾ ಅಂತೇನೆ, ಆದರೆ ಬದುಕಿರುವ ಅಮ್ಮನನ್ನು ಕಳೆದುಕೊಂಡಿರುವ ನನಗೆ ಶಾಲ್ಮಲಿಯಕ್ಕ ಕೂಡ ಅಮ್ಮನಂತೆ' ಎಂದು ಕಣ್ಣೀರು ಒರಸಿಕೊಂಡಳು ಸನ್ಮತಿ.

ಅಪ್ಪ ಅಮ್ಮನ ಜೊತೆ ಮೂರು ತಿಂಗಳು ಇದ್ದು ಅಭಿ ಅಮೆರಿಕೆಗೆ ಮರಳಿ ಹೋದ.

ಶಾಲ್ಮಲಿಯ ದೈಹಿಕ ಸ್ಥಿತಿಯಲ್ಲಿ ಗಮನೀಯವಾದ ಸುಧಾರಣೆ ಉಂಟಾಗಲಿಲ್ಲ. ನರಹರಿ ಮಗನಿಗೆ ಫೋನು ಮಾಡಿ ಶಾಲ್ಮಲಿಯ ಆರೋಗ್ಯ ತೀವ್ರವಾಗಿ ಕೆಡುತ್ತಾ ಇರುವ ಬಗ್ಗೆ ಹೇಳಿದ.

### ಶಾಲ್ಮಲಿಗೆ ಮತ್ತೆ ಅನಾರೋಗ್ಯ

ಅಮೆರಿಕ ತಲಪಿದ ಎರಡು ವಾರದಲ್ಲೇ ಅಪ್ಪನಿಂದ ತಾಯಿಯ ಅಸೌಖ್ಯದ ವಿಚಾರ ತಿಳಿದೊಡನೆ ಅಭಿ ಪುನಃ ಬಂದ.

'ಅಪ್ಪಾ, ಏನಾದರೂ ನೆಪ ಹೇಳಿ ಒಂದು ತಿಂಗಳು ಇಲ್ಲಿ ಇರುತ್ತೇನೆ. ನಾನು ಹೇಳಿದಂತೆ ಎಲ್ಲಾ ಮುಗಿಸಿ ಅಮೆರಿಕೆಯಿಂದ ಹೊರಡಲು ಆಗಲಿಲ್ಲ. ನನ್ನ ಕಂಪೆನಿಗೆ ನನ್ನನ್ನು ಬಿಡಲು ಇಷ್ಟವಿಲ್ಲ. 'ಯೂ ಆರ್ ವನ್ ಆಫ್ ದ ಬೆಸ್ಟ್ ಮೆನ್ ಇನ್ ಅವರ್ ಕಂಪೆನಿ. ಇನ್ನು ಐದು ವರ್ಷ ನಮ್ಮ ಜೊತೆ ಇರಿ. ಅನಂತರ ನಮ್ಮ ಕಂಪೆನಿ ಎರಡಾಗಿ ವಿಭಜನೆ ಹೊಂದುತ್ತದೆ. ಆಗ ಒಂದು ಭಾಗ ಇಂಡಿಯಕ್ಕೆ ನಿಮ್ಮ ಸಿಲಿಕಾನ್ ಸಿಟಿ, ಐಟಿಬೀಟಿ ಮೆಕ್ಕಾ ಆಗಿರುವ ಬೆಂಗಳೂರಿಗೆ ಬರುತ್ತದೆ. ಆಗ ನಿಮ್ಮನ್ನು ಬೆಂಗಳೂರು ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸ್ತೇವೆ. ಈಗಲೇ ನಿಮಗೆ ನಮ್ಮ ಆಫರನ್ನು ಬರೆದು ಕೊಡಲು ಕೂಡ ನಾವು ಸಿದ್ಧರಿದ್ದೇವೆ. ಆದರೆ ನೀವು ಅದನ್ನು ಸ್ವೀಕರಿಸಿ ಬೆಂಗಳೂರಿಗೆ ಬರುವವರೆಗೆ ಯಾರಿಗೂ ಈ ವಿಚಾರ ತಿಳಿಯಬಾರದು' ಎಂದು ಹೇಳಿ ದೊಡ್ಡ ಹುದ್ದೆ ಕೊಟ್ಟು ಕಂಪೆನಿಯ ಉಪವಿಭಾಗದ ಮುಖ್ಯಸ್ಥನನ್ನಾಗಿ ನೇಮಿಸಿದ್ದಾರೆ. ಯಾವ ಕಾರಣ ಹೇಳಿದರೂ ಅವರು ನನ್ನನ್ನು ಬಿಡಲು ಒಪ್ಪಲಿಲ್ಲ. ಕೊನೆಗೆ ವರ್ಷದಲ್ಲಿ ಆರು ತಿಂಗಳಿಗೊಮ್ಮೆ ಎರಡು ಬಾರಿ ನಿಮ್ಮ ದೇಶಕ್ಕೆ ಹೋಗಿ ನಿಮ್ಮ ಅಪ್ಪ ಅಮ್ಮನ ಜೊತೆಗಿದ್ದು ಬನ್ನಿ. ಮದುವೆಯಾಗುತ್ತೀರಾದರೆ ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ಬನ್ನಿ. ನಿಮ್ಮ ಪಯಣದ ಖರ್ಚು ಕಂಪೆನಿ ಕೊಡ್ತದೆ' ಎಂದರು. ಬಹಳ ಯೋಚನೆ ಮಾಡಿ, ಮುಂದೇನಾಗುತ್ತೆ ನೋಡೋಣ ಎಂದು ಒಪ್ಪಿಕೊಂಡೆ ಎಂದ ಅಭಿ.

ಇಂಗ್ಲೆಂಡಿನಲ್ಲಿ ಕಂಪೆನಿಯ ಯುರೋಪಿಯನ್ ವಿಭಾಗದ ಮುಖ್ಯಸ್ಥನಾಗಿ ನೇಮಕಗೊಂಡ ಒಂದು ತಿಂಗಳ ನಂತರ ಅಭಿ ಪುನಃ ಅಮ್ಮನನ್ನು ಕಾಣಲು ಬಂದ. ತನ್ಮಧ್ಯೆ ಶಾಲ್ಮಲಿಯ ಆರೋಗ್ಯ ತುಂಬಾ ಹದಗೆಟ್ಟಿತ್ತು. ಯಾವ ಆಹಾರವೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ. ಮೊದಲೇ ಕೃಶವಾಗಿದ್ದ ಶಾಲ್ಮಲಿಯ ಶರೀರ ದಿನದಿಂದ ದಿನಕ್ಕೆ ದುರ್ಬಲವಾಗುತ್ತಿತ್ತು. ಡಾಕ್ಟರು ಹೊಸ ಹೊಸ ಇಂಜೆಕ್ಷನ್ ಚುಚ್ಚುತ್ತಲೇ ಇದ್ದರು.